ಸಿಹಿಮೊಗೆ ರಮೇಶ್, ಮೈಸೂರು
ಹಣ ಮತ್ತು ಸಮಯದ ವ್ಯತ್ಯಾಸವೇನು?



ಹಣದ ಕೋಶ ನಮ್ಮಲ್ಲಿರುತ್ತದೆ; ಸಮಯದ ಕೋಶದಲ್ಲಿ ನಾವಿರುತ್ತೇವೆ.

ಹೆಚ್.ಎಂ. ಚನ್ನವೀರಯ್ಯ, ಊರಿಲ್ಲ
ಕೊರೊನಾ ಒಟ್ಟು ಎಷ್ಟು ಅಲೆಗಳಿವೆ?
ಜನರು ಎಷ್ಟು ಬೇಜವಾಬ್ದಾರಿಯಿಂದ ಅಲೆದಾಡುತ್ತಾರೋ ಅಷ್ಟು.

ಕೆ.ಹೆಚ್.ಆರ್.ಕೆ. ರೆಡ್ಡಿ, ಬೆಂಗಳೂರು
ಮನುಷ್ಯ ಯಾವ ಕೆಲಸ ಮಾಡಿದರೆ ಸುಸ್ತಾಗಿ ನೆಲದ ಮೇಲೆ ಬೀಳುತ್ತಾನೆ?
ಅತಿಯಾದ ಭೋಜನ, ಅತಿಯಾದ ಕುಡಿತ.

ಎನ್.ಕೆ. ಹೆಬ್ಬಾರ, ಕೋಣೆ
ಸೀತಾಮಾತೆಯನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಿದ್ದು ತಪ್ಪಲ್ಲವೇ ರಾಮ್‌ಜೀ?



ಅಂದಿನ ಯಾವುದೇ ಮಹಿಳಾ ಸಂಘ ಧಿಕ್ಕಾರ ಕೂಗಿದ ದಾಖಲೆ ಇಲ್ಲವಾದ್ದರಿಂದ, ಅಂದಿಗೆ ಸರಿಯೆನಿಸಿತ್ತೇನೋ.

ಅಂಚೆ ಸುಬ್ರಹ್ಮಣ್ಯ, ಬೆಂಗಳೂರು
ಎಡಗೈಗೆ ಕೆಲಸ ಜಾಸ್ತೀನೋ, ಬಲಗೈಗೆ ಕೆಲಸ ಜಾಸ್ತೀನೋ ಹೇಳಿ ರಾಮ್?
ಭಾರತದಲ್ಲಂತೂ ಬಲಗೈಗೇ. ಕಮ್ಯುನಿಸಂ ಇಲ್ಲಿ ಕಡಿಮೆಯೇ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ದೇಶದ ಎಲ್ಲ ನಾಯಕರೂ ಸನ್ಯಾಸಿಗಳಾದರೆ ಹೇಗಿರುತ್ತೆ?
ಹುಡುಗಿಯರಿಗೆ ಝೆಡ್ ಸೆಕ್ಯುರಿಟಿ ಬೇಕಾಗುತ್ತದೆ.

ಬಿ.ಆರ್. ಉಷಾ, ಬೆಂಗಳೂರು
ವಿಧವೆಯರು ಬಿಳಿಸೀರೆ ಉಡಬೇಕೆನ್ನುತ್ತಾರೆ. ಏಳು ಬಣ್ಣ ಸೇರಿ ಬಿಳಿಯ ಬಣ್ಣ ಆಗಿರುವುದಲ್ಲವೆ?
ಅದು ಆಕೆಯ ಏಳು ಬಣ್ಣದ ಕನಸುಗಳೂ ಮೂರಾಬಟ್ಟೆ ಆದುದರ ಸೂಚಕವಂತೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಅಂದಿನ ಶಿಕ್ಷಕರಿಗೂ, ಇಂದಿನ ಶಿಕ್ಷಕರಿಗೂ ವ್ಯತ್ಯಾಸವೇನು?
ಅಂದಿನವರಿಗೆ ಅಹ, ದಧ, ಶಷಸ ಇವುಗಳ ಉಚ್ಚಾರವ್ಯತ್ಯಾಸ ತಿಳಿದಿತ್ತು.

ವಿ. ಹಮೀದ್, ವಿಟ್ಲ
ಇಳಿವಯಸ್ಸಿನಲ್ಲಿ ದೇವಭಕ್ತಿ ಜಾಸ್ತಿಯಾಗಲು ಕಾರಣವೇನು?
ಭಕ್ತಿ ಸಬ್ಜೆಕ್ಟಲ್ಲಿ ಫೇಲ್ ಆದರೆ ದೇವ ನರಕಕ್ಕೆ ತಳ್ಳಿಬಿಟ್ಟಾನೆಂಬ ಭಯ.

ರಾಜಶೇಖರ ಹಾದಿಮನಿ, ಧಾರವಾಡ
ನಮ್ಮದು ಪ್ರಜಾಪ್ರಭುತ್ವ ದೇಶವಾದರೂ ಪ್ರಜೆಗಳು ಪ್ರಭುಗಳಲ್ಲ ಅಲ್ಲವೇ ರಾಮ್?
ಮಂತ್ರಿಗಳನ್ನು ಪ್ರಭುಗಳಂತೆ ಕಾಣುವ ಯಾವ ದೇಶವೂ ನಿಜವಾದ ಪ್ರಜಾಪ್ರಭುತ್ವ ದೇಶವಲ್ಲ.

ಮಹಾವೀರ ಕಾಸರ, ಶಿವಮೊಗ್ಗ
ನದಿಯ ನೀರನ್ನು ಬಳಸಿ, ನದಿಗೆ ಬಿಟ್ಟಾಗ ಏನಾಗುತ್ತದೆ?
ಪಲ್ಯೂಷನ್.

ನಾಗೇಶ ಮೈಸೂರು, ಸಿಂಗಪುರ
ಪ್ಲವ ಸಂವತ್ಸರ ಶಾರ್ವರಿಯ ವಿಪ್ಲವಗಳನ್ನೆಲ್ಲ ನಿವಾರಿಸಿ, ಸುಗಮವಾಗಿ ದಾಟಿಸಬಹುದೆ?
ವಿಪ್ಲವದ ನದಿಯಲ್ಲಿ ಜಾಗರೂಕತೆಯ ತೆಪ್ಪದಲ್ಲಿ ಕುಳಿತು ವಿವೇಕದ ಹುಟ್ಟು ಹಾಕಿದರೆ ಮಾತ್ರ.

ಎನ್. ವೈದೇಹಿ, ಮೈಸೂರು
ತುಂಬಾ ಹೆಸರು ಮಾಡಿರುವ ನಟರು, ಸಾಹಿತಿಗಳಲ್ಲಿ ಕೆಲವರು ಸಾಮಾನ್ಯರೊಡನೆ ಮಾತನಾಡಲು ಬಯಸುವುದಿಲ್ಲವೇಕೆ?
ಸಾಮಾನ್ಯರ ಒಳಿತಿಗೇ. ಹಾಲು ಮೊಸರಾದಮೇಲೆ ಹಾಲಿನೊಂದಿಗೆ ಸೇರಿದರೆ ಹಾಲೇ ಹಾಳು.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
ನನ್ನ ಜಾತಕದಲ್ಲಿ ಎರಡು ಮದುವೆ ಯೋಗ ಇದ್ದರೂ ಇನ್ನೂ ನನಗೆ ಕನ್ಯೆಯೇ ಸಿಕ್ಕಿಲ್ಲವಲ್ಲಾ...?
ಕನ್ಯೆಯೊಡನೆ ಎಂದೇನಿಲ್ಲವಲ್ಲ! ವಿಚ್ಛೇದಿತೆಯನ್ನೋ, ವಿಧವೆಯನ್ನೋ ಹುಡುಕಿ ವರಿಸಿ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಕೆಲವರು ಚಿಕ್ಕ ಚಿಕ್ಕ ವಿಷಯಗಳಿಗೂ ತಲೆಬಿಸಿ ಮಾಡಿಕೊಳ್ಳುತ್ತಾರಲ್ಲಾ...?
ವಿಷಯಕ್ಕೆ ಅಗತ್ಯವಾದ ಲಕ್ಷ್ಯ ಕೊಟ್ಟಿರುವುದಿಲ್ಲ. ಅಟೆನ್ಷನ್ ಕಡಿಮೆಯಾದಷ್ಟೂ ಟೆನ್ಷನ್ ಹೆಚ್ಚು.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಬಡವರು ಗೌರವದ ಬದುಕು ನಡೆಸುವುದು ಯಾವ ಯುಗದಲ್ಲಿ?
ಕುಚೇಲ, ಗಳಗನಾಥರು ಮಾನಗೇಡಿಗಳಾಗಿರಲಿಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು
ಬೋಧಿವೃಕ್ಷದ ಕೆಳಗೆ ಕುಳಿತು ತಪಸ್ಸು ಮಾಡಿದವರೆಲ್ಲ ಬುದ್ಧರಾಗಲು ಸಾಧ್ಯವೆ?



ಅರಮನೆಯ ಸುಖ ತ್ಯಜಿಸಿ ಮನದ ಏಕಾಗ್ರತೆ ಹೊಂದುವ ತಾಕತ್ತಿದ್ದರೆ ಸಾಧ್ಯ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಸಂಸ್ಕಾರವಿಲ್ಲದ ಸಂಸಾರಕ್ಕೆ ಏನೆನ್ನಬೇಕು ರಾಮ್‌ಜಿ?
ಸ್ಲಂಸಾರ.

ನಂದೀಶ ಬಿ.ಸಿ. ಮೈಸೂರು
ಮಾನವ ಬುದ್ಧಿವಂತ ಪ್ರಾಣಿ ಎಂದು ಹೇಳಿದವರು ಯಾರು?
ಬೇರಾವ ಪ್ರಾಣಿಯೂ ಮಾತನಾಡದಲ್ಲ!

**ರಾಮ್**

ಪ್ರಶ್ನೆಯನ್ನು ಕಳಿಸಲು: editorsu@sudha.co.in